**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಉಪಸ್ಥಿತರು**

**ಕಾವ್ಯಶ್ರೀ.ಎಂ. ಬಿ . ಎ ., ಎಲ್ .ಎಲ್ ಬಿ .,**

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.,

ಕೊಳ್ಳೇಗಾಲ.

**ಅಸಲು ದಾವಾ ಸಂಖ್ಯೆ. 208/2018**

**ದಿನಾಂಕಃ 01ನೇ ಡಿಸೆಂಬರ್ 2025**

**ವಾದಿಃ** ಶ್ರೀಮತಿ ಜಿ. ಗೀತಾ ಕೋಂ ಲೇಟ್ ಎಂ. ರಾಜು,
ವಯಸ್ಸುಃ ಸುಮಾರು 58 ವರ್ಷಗಳು,
ವಾಸಃ ಎ/472, ರಾಜೀವನಗರ,
ಕೊಳ್ಳೇಗಾಲ ಬಡಾವಣೆ, ಕೊಳ್ಳೇಗಾಲ.
**ಪ್ರತಿನಿಧಿಸುವವರು ಅವರ ಸಾಮಾನ್ಯ ಅಧಿಕಾರ ಪತ್ರವನ್ನು ಪಡೆದವರು**
ತೋಮಸ್ ಆರ್. ವಿಕ್ಟರ್ ಬಿನ್ ಡಾಃ ಆರ್. ವಿಕ್ಟರ್ ರಾಜ್ ಕುಮಾರ್
ವಯಸ್ಸುಃ ಸುಮಾರು 42 ವರ್ಷಗಳು,
ವಾಸಃ 3 349, ಆರ್. ಎಂ.ಎಸ್ ಮತ್ತು ಹೆಚ್.ಪಿ.ಒ ಲೇಔಟ್,
ಶಕ್ತಿನಗರ, ಮೈಸೂರು-570019.
**(ವಾದಿ ಪರ ಶ್ರೀ ಪಿ. ಎಸ್., ವಕೀಲರು)**

**ವಿರುದ್ಧ**

**ಪ್ರತಿವಾದಿಗಳುಃ** 1. ಜಯರಾಜ್ ಬಿನ್ ಲೇಟ್ ಜಾನ್,
ವಾಸಃ ಕ್ರಿಶ್ಚಿಯನ್ ಬೀದಿ, ಮುಡಿಗುಡಂ,
ಕೊಳ್ಳೇಗಾಲ.

2. ಜಯಶೀಲ ಬಿನ್ ಲೇಟ್ ಜಾನ್,
ವಾಸಃ ಕ್ರಿಶ್ಚಿಯನ್ ಬೀದಿ, ಮುಡಿಗುಡಂ,
ಕೊಳ್ಳೇಗಾಲ.
**( ಪ್ರತಿವಾದಿಗಳ ಪರ ಶ್ರೀ. ಯು.ಪಿ., ವಕೀಲರು)**

**ಮಧ್ಯಂತರ ಅರ್ಜಿ 10 ಮತ್ತು 11 ರಲ್ಲಿನ ಸ್ಥಾನಮಾನ**

**ಅರ್ಜಿದಾರರುಃ ಜಿ. ಗೀತಾ ಪ್ರತಿನಿಧಿಸುವವರು ಶ್ರೀ ತೋಮಸ್. ಆರ್. ವಿಕ್ಟರ್,**

**(ವಾದಿ)**

**ವಿರುದ್ಧ**

**ಎದುರುದಾರರುಃ ಜಯರಾಜ್ ಮತ್ತು ಇನ್ನೊಬ್ಬರು**

**(ಪ್ರತಿವಾದಿಗಳು )**

| | | |
|---|---|---|
| *i* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | **ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 151, 18 ನಿಯಮ 17 ಸಹವಾಚಕ ಕಲಂ 151** |
| *ii* | ಮಧ್ಯಂತರ ಅರ್ಜಿಯಲ್ಲಿ ಕೋರಿರುವ ಪರಿಹಾರ | **ಪುನರ್ ಸ್ಥಾಪನೆ, ಹಾಗೂ ಪಿಡಬ್ಲ್ಯೂ1 ರವರ ಮುಂದುವರೆದ ಮುಖ್ಯ ವಿಚಾರಣೆಗೆ ಅನುಮತಿ ಕೋರಿ** |
| *iii* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | ***02.08.2025*** |
| *iv* | ಮಧ್ಯಂತರ ಅರ್ಜಿಯ ಸಂಖ್ಯೆ | **ಮಧ್ಯಂತರ ಅರ್ಜಿ ಸಂಖ್ಯೆ 10 ಮತ್ತು 11** |
| *v* | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | ***22.08.2025*** |
| *vi* | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | ***01.12.2025*** |

**ಮಧ್ಯಂತರ ಅರ್ಜಿ ಸಂಖ್ಯೆ 10 ಮತ್ತು 11 ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 151, ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 18 ನಿಯಮ17 ಸಹವಾಚಕ ಕಲಂ 151 ಅರ್ಜಿಯ ಮೇಲಿನ ಆದೇಶ.**

ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 10 ಮತ್ತು 11 ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 151 ಹಾಗೂ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 18 ನಿಯಮ17 ಸಹವಾಚಕ ಕಲಂ 151 ಅರ್ಜಿಯನ್ನು ಸಲ್ಲಿಸಿ, ಡಿಡಬ್ಲ್ಯೂ -1ರವರ ಪಾಟಿ ಸವಾಲಿನ ಹಂತದಿಂದ ಪ್ರಾಸಾ-1 ರವರ ಮುಂದುವರೆದ ಮುಖ್ಯ ವಿಚಾರಣೆಗೆ ಒಳಪಡಿಸಲು ದಾವೆಯನ್ನು ಪುನರ್ ಸ್ಥಾಪಿಸಲು ಅನುಮತಿ ಕೋರಿಕೊಂಡಿರುತ್ತಾರೆ.

**2.** ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ, ವಾದಿಯು ಪ್ರತಿವಾದಿಗಳ ವಿರುದ್ಧ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆ ಆದೇಶವನ್ನು ಕೋರಿಕೊಂಡಿರುತ್ತಾರೆ. ವಾದಿಯು ತಮ್ಮ ಮುಖ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ. ಆ ನಂತರ ಪ್ರಾಸಾ.1 ರವರ ಮುಂದುವರೆದ ಮುಖ್ಯ ವಿಚಾರಣೆ ಏನು ಇಲ್ಲ ಎಂದು ತೆಗೆದುಕೊಂಡು ಡಿಡಬ್ಲ್ಯೂ -1 ರವರ ಪಾಟೀ ಸವಾಲನ್ನು ಮಾಡಲು ದಾವೆಯನ್ನು ಕಾಯ್ದಿರಿಸಿ ತದನಂತರ ಪ್ರತಿವಾದಿಯ ವಿಚಾರಣೆಯನ್ನು ಮಾಡಲಾಗಿದ್ದು ವಾದಿಯ ವಿಚಾರಣೆ ಮಾಡುವ ಸಮಯದಲ್ಲಿ ಹಾಗೂ ದಾವೆಯನ್ನು ದಾಖಲು ಮಾಡಿದ ಸಮಯದಲ್ಲಿ ಕೆಲವು ದಾಖಲೆಗಳು ದೊರೆತಿರುವುದಿಲ್ಲ. ಪ್ರಸ್ತುತ ಈಗ ದಾಖಲೆಗಳು ದೊರೆತಿದ್ದು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಲುವಾಗಿ ಡಿಬ್ಲ್ಯೂ -1 ರವರ ಪಾಟೀ ಸವಾಲಿನ ಹಂತದಿಂದ ಪ್ರಾಸಾ-1 ರವರ ಮುಂದುವರೆದ ವಿಚಾರಣೆಗಾಗಿ ದಾವೆಯನ್ನು ಪುನರ್ ಸ್ಥಾಪಿಸಿ, ಪ್ರಾಸಾ.1 ರವರನ್ನು ಮುಂದುವರೆದ ಮುಖ್ಯ ವಿಚಾರಣೆಗೆ ಒಳಪಡಿಸಲು ಅನುಮತಿ ಕೋರಿಕೊಂಡಿರುತ್ತಾರೆ.

**3.** ಸದರಿ ಮೇಲ್ಕಂಡ ಅರ್ಜಿಗಳಿಗೆ ಪ್ರತಿವಾದಿಯರು ತಮ್ಮ ತಕರಾರನ್ನು ಸಲ್ಲಿಸಿ, ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಕಾನೂನಿನಡಿಯಲ್ಲಿ ಊರ್ಜಿತವಾಗಿರುವುದಿಲ್ಲ. ಈಗಾಗಲೇ ವಾದಿಯ ವಿಚಾರಣೆ ಮುಗಿದು ಡಿಡಬ್ಲ್ಯೂ -1 ರವರ ಪಾಟೀ ಸವಾಲಿನ ಹಂತದಲ್ಲಿದ್ದು ವಾದಿಯು ಹೆಚ್ಚುವರಿ ದಾಖಲೆಗಳನ್ನು ಒದಗಿಸಲು ಸದರಿ ಅರ್ಜಿಗಳನ್ನು ದಾಖಲಿಸಿದ್ದು, ಸದರಿ

ದಾಖಲೆಗಳು ದಾವೆ ಹೂಡುವ ಸಮಯದಲ್ಲಿಯೇ ವಾದಿಯ ಬಳಿ ಇದ್ದು ಅದರ ಬಗ್ಗೆ ವಾದಿಗೆ ಚೆನ್ನಾಗಿ ತಿಳಿದಿರುತ್ತದೆ. ಅಲ್ಲದೇ ವಾದಿಯು ಪ್ರಮಾಣ ಪತ್ರಿಕೆಯಲ್ಲಿ ನೀಡಿರುವ ಕಾರಣಗಳು, ದಾಖಲೆಗಳು 1964 ರ ವರ್ಷಕ್ಕೆ ಸಂಬಂಧಿಸಿವೆ ಮತ್ತು ಅವುಗಳನ್ನು ಮೊದಲೇ ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ, ಅವು ಅಸ್ಪಷ್ಟ, ಸಮರ್ಥನೀಯವಲ್ಲ ಮತ್ತು ಯಾವುದೇ ಸಾಕ್ಷ್ಯಗಳಿಂದ ಬೆಂಬಲಿತವಾಗಿಲ್ಲ ಹಾಗೂ ದಾಖಲೆಗಳನ್ನು ಸರಿಯಾದ ಹಂತದಲ್ಲಿ ಹಾಜರುಪಡಿಸದಿರಲು ಯಾವುದೇ ಸಾಕಷ್ಟು ಕಾರಣವನ್ನು ನೀಡಿರುವುದಿಲ್ಲ. ಕೇವಲ ಕಾಲವಿಳಂಬ ಮಾಡುವ ಉದ್ದೇಶಕ್ಕಾಗಿ ಮೇಲ್ಕಂಡ ಅರ್ಜಿಗಳನ್ನು ದಾಖಲು ಮಾಡಿರುತ್ತಾರೆ. ಆದ್ದರಿಂದ, ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಬೇಕಾಗಿ ಕೋರಿಕೊಳ್ಳುತ್ತಾರೆ.

4. ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳು ಹಾಗೂ ಉಭಯ ಪಕ್ಷಗಾರರ ವಾದ ವಿವಾದಗಳನ್ನು ಆಲಿಸಿದ ನಂತರ ಸದರಿ ಅರ್ಜಿಯನ್ನು ತೀರ್ಮಾನಿಸುವಲ್ಲಿ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

ಅಂಶ 1:ಅರ್ಜಿದಾರರು ಸಲ್ಲಿಸಿರುವ, ಮಧ್ಯಂತರ ಅರ್ಜಿ ಸಂಖ್ಯೆ 10 ಮತ್ತು 11 ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 151 ಹಾಗೂ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 18 ನಿಯಮ17 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಗಳನ್ನು ಮೇಲ್ನೋಟಕ್ಕೆ ರುಜುವಾತು ಪಡಿಸಿರುವರೇ?

ಅಂಶ 2:ಯಾವ ಆದೇಶ?

5. ಎರಡು ಪಕ್ಷಗಾರರ ವಾದ ವಿವಾದಗಳನ್ನು ಆಲಿಸಿ, ನ್ಯಾಯಾಲಯದ ಮುಂದಿರುವ ದಾಖಲಾತಿಗಳ ಅಧಾರದ ಮೇಲೆ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಯಿತು.

ಅಂಶ 1:- ಸಕರಾತ್ಮಕವಾಗಿ

ಅಂಶ 2:- ಅಂತಿಮ ಆದೇಶದಂತೆ

-: **ಕಾರಣಗಳು** :-

6. **ಅಂಶ 1 :-** ವಾದಿಯು/ಅರ್ಜಿದಾರರು ಮೇಲ್ಕಂಡ ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿ, ಡಿಡಬ್ಲ್ಯೂ-1 ರವರ ಪಾಟೀ ಸವಾಲಿನ ಹಂತದಿಂದ ದಾವೆಯನ್ನು ಪುನರ್ ಸ್ಥಾಪಿಸಿ ಹಾಗೂ ಪ್ರಾಸಾ.1 ರವರನ್ನು ಮುಂದುವರೆದ ಮುಖ್ಯ ವಿಚಾರಣೆಗಾಗಿ ಅನುಮತಿ ಕೋರಿ ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿರುತ್ತಾರೆ.

7. ವಾದಿಯು, ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಡಿಡಬ್ಲ್ಯೂ-1 ರವರ ಮುಂದುವರೆದ ಪಾಟಿ ಸವಾಲಿನ ಹಂತದಲ್ಲಿ ಮೇಲ್ಕಂಡ ಅರ್ಜಿಗಳನ್ನು ಸಲ್ಲಿಸಿಕೊಂಡಿರುತ್ತಾರೆ. ಆದರೆ, ಪ್ರಾಸಾ.1 ರವರನ್ನು ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲು ಮಾಡಿ ಸದರಿಯವರ ವಿಚಾರಣೆಯು ಮುಕ್ತಾಯಗೊಂಡ ನಂತರ ಡಿಡಬ್ಲ್ಯೂ-1 ರವರ ಪಾಟೀ ಸವಾಲಿಗಾಗಿ ನಿಗದಿಪಡಿಸಲಾಗಿರುತ್ತದೆ. ಈ ಹಂತದಲ್ಲಿ ಮೇಲ್ಕಂಡ ಅರ್ಜಿಗಳನ್ನು ದಾಖಲು ಮಾಡಿ ತಮ್ಮ ಪರವಾಗಿ ದಾಖಲಾತಿಗಳನ್ನು ಹಾಜರುಪಡಿಸಿ ಮುಂದುವರೆದ ಮುಖ್ಯ ವಿಚಾರಣೆಗೆ ಅನುಮತಿ ಕೋರಿಕೊಂಡಿರುತ್ತಾರೆ. ವಾದಿಯರು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆಯನ್ನು ದಾಖಲು ಮಾಡಿದ್ದು, ಈ ದಾವೆಯಲ್ಲಿ ಎಲ್ಲಾ ವಿವಾದಾಂಶಗಳನ್ನು ಸಹ ವಾದಿಯೇ ರುಜುವಾತು ಪಡಿಸಬೇಕಾಗಿರುತ್ತದೆ. ಆದ ಕಾರಣ ವಾದಿಗೆ ತಮ್ಮ ಪರವಾದ ವಾದವನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ಸಾಕಷ್ಟು ಕಾಲಾವಕಾಶ ಹಾಗೂ ಅನುಮತಿ ನೀಡುವುದು ಅವಶ್ಯಕವೇಂದು ಕಂಡು ಬಂದಿರುತ್ತದೆ. ಒಂದು ವೇಳೆ ಅರ್ಜಿಯನ್ನು ವಜಾಗೊಳಿಸಿದ್ದೇ ಆದಲ್ಲಿ,

ದಾವೆಯ ಬಾಹುಳ್ಯ ಹೆಚ್ಚಾಗುವ  ಸಾಧ್ಯತೆ ಇರುತ್ತದೆ.  ಆ ಪ್ರಕಾರವಾಗಿ ಅರ್ಜಿದಾರರು ಅರ್ಜಿಯನ್ನು ಕಾಲವಿಳಂಬ ಮಾಡಿ ಸಲ್ಲಿಸಿರುತ್ತಾರೆ. ಆದರೆ, ಸದರಿ ಕಾಲವಿಳಂಬವನ್ನು ಖರ್ಚನ್ನು ವಿಧಿಸುವುದರ ಮೂಲಕ ಮನ್ನಿಸಬಹುದಾಗಿರುತ್ತದೆ. ಆದ್ದರಿಂದ, ಈ ಮೇಲ್ಕಂಡ ಚರ್ಚಿಸಿದ ಕಾರಣಗಳಿಗಾಗಿ ಅಂಶ-1ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

8. **ಅಂಶ-2** :- ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಮಾಡುವ ಆದೇಶವೇನೆಂದರೆ:-

**ಆದೇಶ**

ಅರ್ಜಿದಾರ ಸಲ್ಲಿಸಿರುವ, ಮಧ್ಯಂತರ ಅರ್ಜಿ ಸಂಖ್ಯೆ 10 ಮತ್ತು 11 ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 151 ಹಾಗೂ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 18 ನಿಯಮ 17 ಸಹವಾಚಕ ಕಲಂ 151 ಅರ್ಜಿಗಳನ್ನು ಒಟ್ಟು ರೂ. 500/-ಗಳ ಖರ್ಚನ್ನು ವಿಧಿಸುವ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶದಂತೆ ಕಾಲವಿಳಂಬ ಮಾಡಿ ಸಲ್ಲಿಸಿದ ದಾಖಲಾತಿಗಳನ್ನು ಕಡತಕ್ಕೆ ತೆಗೆದುಕೊಳ್ಳಲಾಗಿದೆ ಹಾಗೂ ಪಿಡಬ್ಲ್ಯೂ.1 ರವರನ್ನು ಮುಂದುವರೆದ ಮುಖ್ಯ ವಿಚಾರಣೆಗೆ ಅನುಮತಿ ನೀಡಲಾಗಿದೆ.

ಪ್ರಾಸಾ.1 ರವರ ಮುಂದುವರೆದ ಮುಖ್ಯ ವಿಚಾರಣೆಗೆ ತೆರೆದ ನ್ಯಾಯಾಲಯದಲ್ಲಿ ಕರೆಯುವ ದಿನಾಂಕಃ **15.12.2025.**

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದನಂತರ ಅವರು ತಯಾರಿಸಿದ ಪ್ರತಿಯನ್ನು ಓದಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ 01.12.2025 ರಂದು ಘೋಷಿಸಲಾಯಿತು.)

**(ಕಾವ್ಯಶ್ರೀ.ಎಂ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಕೊಳ್ಳೇಗಾಲ.

**(ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ ಆದೇಶವನ್ನು ಘೋಷಿಸಲಾಯಿತು)**

**ಆದೇಶ**

ಅರ್ಜಿದಾರ ಸಲ್ಲಿಸಿರುವ, ಮದ್ಯಂತರ ಅರ್ಜಿ ಸಂಖ್ಯೆ 10 ಮತ್ತು 11 ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 151 ಹಾಗೂ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 18 ನಿಯಮ 17 ಸಹವಾಚಕ ಕಲಂ 151 ಅರ್ಜಿಗಳನ್ನು ಒಟ್ಟು ರೂ. 500/-ಗಳ ಖರ್ಚನ್ನು ವಿಧಿಸುವ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶದಂತೆ ಕಾಲವಿಳಂಬ ಮಾಡಿ ಸಲ್ಲಿಸಿದ ದಾಖಲಾತಿಗಳನ್ನು ಕಡತಕ್ಕೆ ತೆಗೆದುಕೊಳ್ಳಲಾಗಿದೆ ಹಾಗೂ ಪಿಡಬ್ಲ್ಯೂ.1 ರವರನ್ನು ಮುಂದುವರೆದ ಮುಖ್ಯ ವಿಚಾರಣೆಗೆ ಅನುಮತಿ ನೀಡಲಾಗಿದೆ.

ಪ್ರಾಸಾ.1 ರವರ ಮುಂದುವರೆದ ಮುಖ್ಯ ವಿಚಾರಣೆಗೆ ತೆರೆದ ನ್ಯಾಯಾಲಯದಲ್ಲಿ ಕರೆಯುವ ದಿನಾಂಕಃ 15.12.2025.

**(ಕಾವ್ಯಶ್ರೀ.ಎಂ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಕೊಳ್ಳೇಗಾಲ.